# ಮಂಗಳೂರು ಧರ್ಮಪ್ರಾಂತ್ಯದ ಮೌಲ್ಯ ಶಿಕ್ಷಣ ಪರೀಕ್ಷೆ

## ಮಂಗಳ ಜ್ಯೋತಿ, ಮಂಗಳೂರು – 575 005

**ದಿನಾಂಕ : 04–01–2025** **ಸಮಯ : 2½ ಘಂಟೆ**

**ತರಗತಿ : VII** **ಅಂಕ : 80**

**ಸೂಚನೆ:** ಉತ್ತರ ಪತ್ರಿಕೆಯಲ್ಲಿ **ರಿಜಿಸ್ಟರ್ ನಂಬರ್** ಮಾತ್ರ ಬರೆಯಿರಿ. ನಿಮ್ಮ ಹೆಸರು ಬರೆಯಬೇಡಿ.

**I. ಆವರಣದಿಂದ ಸೂಕ್ತ ಉತ್ತರ ಆರಿಸಿ ಬರೆಯಿರಿ: 10x1=10**

1. ನಾವು ಇತರರೊಂದಿಗೆ ಮಾನವೀಯತೆಯಿಂದ ನಡೆದುಕೊಳ್ಳಲು ________ ಕಲಿಸುತ್ತದೆ.
   (ಮೌಲ್ಯಶಿಕ್ಷಣ, ಕಾನೂನು ಶಿಕ್ಷಣ, ಮಾನವ ಶಿಕ್ಷಣ)
2. ಒಳಿತನ್ನು ಆಯ್ಕೆ ಮಾಡಿದಾಗ ಅದು ನಮ್ಮ ________ ಉನ್ನತಿಗೇರಿಸುತ್ತದೆ.
   (ಯಶಸ್ಸನ್ನು, ವ್ಯಕ್ತಿತ್ವವನ್ನು, ನಡವಳಿಕೆಯನ್ನು)
3. ಮಾನವ ಜೀವಿಗಳು ಸ್ವಾಭಾವಿಕವಾಗಿ ಇತರರ ಬಗ್ಗೆ ________ ಹೊಂದಿದ್ದಾರೆ.
   (ಭಾವನೆಗಳನ್ನು, ಸಮಾಧಾನವನ್ನು, ಅನುಕಂಪವನ್ನು)
4. ಬಡ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಲು ವಸ್ತುಗಳನ್ನು ಕೊಡುವುದು ________.
   (ಸದ್ಗುಣ, ದುರ್ಗುಣ, ಕೊರತೆ)
5. ಜೀವನದ ಐಶಾರಾಮ, ಸೌಕರ್ಯ ಮತ್ತೆಲ್ಲಕ್ಕೂ ಮಿಗಿಲಾಗಿ ________ ಬೆಲೆಯುಳ್ಳದ್ದು.
   (ಸಂತೋಷ, ಆನಂದ, ಸ್ವಾತಂತ್ರ್ಯ)
6. ಪ್ರಾಮಾಣಿಕತೆ ನಮಗೆ ವಿಳಂಬವಾದರೂ ತಕ್ಕ ________ ನೀಡುತ್ತದೆ.
   (ಪ್ರೀತಿಯನ್ನು, ಗೌರವವನ್ನು, ಸಂಭಾವನೆಯನ್ನು)
7. ಬನ್ನಿ, ನನ್ನ ________ ಪಾಲ್ಗೊಳ್ಳಿರಿ.
   (ದುಃಖದಲ್ಲಿ, ಸಂತೋಷದಲ್ಲಿ, ಕಷ್ಟದಲ್ಲಿ)
8. ಲಿಲ್ಲಿ ತನ್ನ ________ ಹಳಿದುಕೊಂಡಳು.
   (ಅದೃಷ್ಟವನ್ನು, ಪ್ರತಿಭೆಯನ್ನು, ಸೋಮಾರಿತನವನ್ನು)
9. ಈ ದೇಶದ ಪ್ರಜೆಗಳಾಗಿ ಪಟ್ಟಣ ಮತ್ತು ಹಳ್ಳಿಗಳ ________ ಕಾಪಾಡುವುದು ನಮ್ಮ ಕರ್ತವ್ಯವಾಗಿದೆ.
   (ನೈರ್ಮಲ್ಯ, ಶಿಸ್ತು, ನಿಯಮ)



10. ಈ ಲೋಕದಲ್ಲಿ ________ ಕೊಂಡುಕೊಳ್ಳುವ ವಸ್ತುವಲ್ಲ.
   (ಜ್ಞಾನ, ಸಂತೋಷ, ಅಧಿಕಾರ)

**II. ಬಿಟ್ಟಿರುವ ಸ್ಥಳಗಳನ್ನು ಸರಿಯಾದ ಪದಗಳಿಂದ ತುಂಬಿರಿ: 5x1=5**

1. ದೈವತ್ವದ ನಂತರ ________ ಪ್ರಧಾನ.
2. ಸಂತೋಷ ಯಾವಾಗಲೂ ಅಂತರಂಗದೊಳಗಿನ ವ್ಯವಹಾರವಾಗಿದೆ ಎಂದು ಹೇಳಿದವರು ________.
3. ಪ್ರಾಮಾಣಿಕ ವ್ಯಕ್ತಿಗಳನ್ನು ದೇವರು ________ ಮನುಷ್ಯರು ನಂಬುತ್ತಾರೆ.
4. ಆಳ ಭಾವನೆಗಳುಳ್ಳ ವ್ಯಕ್ತಿ ಮಾತ್ರ ಇತರರ ________ ಅರ್ಥ ಮಾಡಿಕೊಳ್ಳಬಲ್ಲ.
5. ಯಶಸ್ಸಿನ ಮನುಷ್ಯನಾಗಲು ಪ್ರಯತ್ನಿಸಬೇಡ. ಪ್ರತಿಯಾಗಿ ಮಾನವನಾಗು.

**III. ಹೊಂದಿಸಿ ಬರೆಯಿರಿ: 5x1=5**

| | | |
|---|---|---|
| 1. | ಹಾನಿ ಮಾಡುವವರು | – ಹೃದಯದ ಮೌಲ್ಯ |
| 2. | ಸಮಾಜದ ಒಳಿತನ್ನು ಬಯಸುವವರು | – ಸ್ವಾತಂತ್ರ್ಯ |
| 3. | ವಿಧೇಯತೆ | – ಒಳ್ಳೆಯ ಜನರು |
| 4. | ಪ್ರೀತಿ | – ಮೆದುಳಿನ ಮೌಲ್ಯ |
| 5. | ಹೊಣೆಗಾರಿಕೆ | – ಕೆಟ್ಟ ಜನರು |

**IV. ಈ ಕೆಳಗಿನ ವಾಕ್ಯಗಳು ಸರಿ ಅಥವಾ ತಪ್ಪು ಎಂದು ಬರೆಯಿರಿ: 5x1=5**

1. ಮೌಲ್ಯ ಶಿಕ್ಷಣ ಎಲ್ಲಾ ಶಿಕ್ಷಣಕ್ಕಿಂತ ಪ್ರಮುಖವಾದುದು.
2. ನಿಸರ್ಗ ಮಾನವ ಜೀವನದಲ್ಲಿ ಪ್ರಮುಖ ಪಾತ್ರವನ್ನು ವಹಿಸುವುದಿಲ್ಲ.
3. ಕಾಯಾ, ವಾಚಾ, ಮನಸಾ ಇತರರಿಗೆ ಹಾನಿ ಮಾಡುವವರು ಒಳ್ಳೆಯ ಜನರು.
4. ಬಾಯಾರಿಕೆಯಾದಾಗ ಕಂಡ ಸ್ಥಳಗಳಲ್ಲಿ ನೀರನ್ನು ಕುಡಿಯಬೇಕು.
5. ಮನುಷ್ಯನ ಪ್ರಾಮಾಣಿಕತೆಯನ್ನು ಕಂಡು ದೇವತೆಗೆ ತುಂಬಾ ಸಂತೋಷವಾಯಿತು.

**V. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ: 5x1=5**

1. ಮೌಲ್ಯ ಎಂಬ ಪದದ ಅರ್ಥವೇನು?
2. ದೇವತೆ ನಮಗೆ ಯಾವ ನೀತಿಯನ್ನು ಕಲಿಸಲು ಅಪೇಕ್ಷಿಸುತ್ತಾಳೆ?
3. ಮಾನವ ಜೀವಿಗಳ ಎರಡು ಗುಣಗಳು ಯಾವುವು?
4. ಅರ್ಥಭರಿತ ಸ್ವಾತಂತ್ರ್ಯ ಎಂದರೇನು?
5. ನಿನ್ನ ಪ್ರತಿಭೆಗಳಾವುವು?

**VI. ಈ ಕೆಳಗಿನ ಯಾವುದಾದರೂ ಐದು ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿರಿ: 5x2=10**

1. ಮೌಲ್ಯ ಶಿಕ್ಷಣ ತರಗತಿಗೂ ಇತರ ವಿಷಯಗಳ ತರಗತಿಗೂ ಇರುವ ವ್ಯತ್ಯಾಸವನ್ನು ಬರೆಯಿರಿ.
2. ಮಾನವ ಜೀವಿಗಳ ಸ್ವಭಾವವೇನು?
3. ನಿನ್ನ ಜೀವನದಲ್ಲಿ ನೀನು ಎದುರಿಸಿದ ಅತ್ಯುತ್ತಮ ವ್ಯಕ್ತಿ ಯಾರು? ಅವರ ಐದು ಸದ್ಗುಣಗಳನ್ನು ಬರೆ.
4. ಮೊದಲನೆಯ ಮರ ಕಡಿಯುವವನ ಬಗ್ಗೆ ನಿನಗೆ ಅನಿಸಿದ ಅಭಿಪ್ರಾಯವನ್ನು ಬರೆ.
5. ಲಿಂಕನ್ ಮತ್ತು ಬಿಥೋವನ್ ಹೇಗೆ ಪ್ರಖ್ಯಾತರಾದರು?
6 ಮಾಲ್ಪದ ಯುವತಿ ಮದರ್ ತೆರೆಜಾ ಅವರಿಗೆ ಏನೆಂದು ಹೇಳಿದಳು?
7. "ನನ್ನ ಪ್ರತಿಭೆಗಳು" ಕಥೆಯ ಸಾರಾಂಶವನ್ನು ಎರಡು ವಾಕ್ಯಗಳಲ್ಲಿ ಬರೆ.

**VII. ಈ ಕೆಳಗಿನ ಯಾವುದಾದರೂ ಆರು ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರಿಸಿರಿ: 6x3=18**

1. ಮೌಲ್ಯ ಶಿಕ್ಷಣದ ಉದ್ದೇಶಗಳಾವುವು?
2. ಶುದ್ಧತೆಯನ್ನು ಕಾಪಾಡಲು ಯಾವ ವಿಷಯಗಳ ಬಗ್ಗೆ ಜಾಗೃತರಾಗಬೇಕು?
3. ಬೀದಿನಾಯಿಯ ಜೀವನವನ್ನು ವಿವರಿಸು.
4. ಸಂತೋಷದಿಂದಿರಲು ಜಾನ್ ಪೋವೆಲ್ ಸೂಚಿಸಿದ ಹತ್ತು ಅಂಶಗಳಾವುವು?
5. ಶಂಕರ ಮತ್ತು ಸಲೀಮನ ಪ್ರವಾಸದ ಕುರಿತು ಬರೆಯಿರಿ.
6. ವಿವಿಧ ಬಗೆಯ ಮೌಲ್ಯಗಳಾವುವು? ಪ್ರತಿಯೊಂದಕ್ಕೂ ಐದು ಉದಾಹರಣೆಗಳನ್ನು ಕೊಡು.
7. ಶಾಂತಿ ಹಾಗೂ ಸಂಗೀತಾರ ಗುಣಗಳನ್ನು ಬರೆಯಿರಿ. ಇದರಲ್ಲಿ ನಿನಗೆ ಯಾರ ಗುಣ ಮೆಚ್ಚುಗೆಯಾಯಿತು?
8. ಒಂದು ಸ್ವಂತ ಪ್ರಾರ್ಥನೆಯನ್ನು ಬರೆ.

**VIII. ಈ ಕೆಳಗಿನ ಎರಡು ವಿಷಯಗಳ ಕುರಿತು ಟಿಪ್ಪಣಿ ಬರೆಯಿರಿ: 2x5=10**

1. ನಾವು ಮಾನವರು
2. ಆರೋಗ್ಯ ಪ್ರಜ್ಞೆ
3. ನನ್ನ ಅವಕಾಶಗಳು
4. ಪ್ರಾಮಾಣಿಕತೆ



**IX. ಟಿಪ್ಪಣಿ ಓದಿ ಪ್ರಶ್ನೆಗಳನ್ನು ಉತ್ತರಿಸಿರಿ: 2x6=12**

1. ಗಗನ್ ಮತ್ತು ಪ್ರಭಾ ಸಹೋದರ ಸಹೋದರಿಯರು ಒಂದೇ ಶಾಲೆಗೆ ಹೋಗುತ್ತಾರೆ. ಶಾಲೆಯಿಂದ ಮನೆಗೆ ಹೋದಾ ತಕ್ಷಣ ಶಾಲೆಯ ಚೀಲ ಬಿಸಾಡಿ ಆಟವಾಡಲು ಹೋಗುತ್ತಾರೆ. ಮತ್ತೆ ಬಂದು ಧಾರವಾಹಿ ನೋಡುತ್ತಾರೆ. ಶಾಲಾ ಕೆಲಸಗಳಾದ ಓದುವುದು, ಬರೆಯುವುದು ಮಾಡುವುದಿಲ್ಲ. ಮನೆ ಕೆಲಸದಲ್ಲಿ ತಂದೆ-ತಾಯಿಗೂ ಸಹಾಯ ಮಾಡುವುದಿಲ್ಲ. ನಾವು ಹೇಳುವುದು ನಮ್ಮ ಮಕ್ಕಳು ಏನೂ ಕೇಳುವುದಿಲ್ಲ. ನಮಗೆ ಹಿಂದೆ ಮಾತನಾಡುತ್ತಾರೆ ಎಂದು ಅವರ ಹೆತ್ತವರು ವ್ಯಥೆ ಪಡುತ್ತಾರೆ.

   **a. i) ಗಗನ್ ಮತ್ತು ಪ್ರಭಾ ಮಾಡುವುದು ಸರಿಯಾ ತಪ್ಪು?**

   **ii) ಯಾಕೆ?**

   **b. i) ಮಕ್ಕಳು ಮನೆಯಲ್ಲಿ ಮಾಡಬಹುದಾದ ಕೆಲಸಗಳು ಯಾವುವು?**

   **ii) ತಂದೆ ತಾಯಿಯ ಬಗ್ಗೆ ಮಕ್ಕಳಿಗೆ ಇರುವ ಜವಾಬ್ದಾರಿ ಯಾವುದು?**

   **c) ನೀನು ಗಗನ್ ಅಥವಾ ಪ್ರಭಾಳ ಸ್ಥಾನದಲ್ಲಿದ್ದಿದ್ದರೆ ಏನು ಮಾಡುತ್ತಿದ್ದಿ?**

2. ಶ್ವೇತಾ ಏಳನೇ ತರಗತಿಯ ವಿದ್ಯಾರ್ಥಿನಿ. ಅವಳು ತುಂಬಾ ಪ್ರತಿಭಾವಂತೆ. ಆದರೆ ಸ್ವಾರ್ಥಿ ತನ್ನದೇ ತರಗತಿಯಲ್ಲಿ ಕಲಿಯುತ್ತಿರುವ ಪ್ರಿಯಾಳಿಗೆ ಗಣಿತ ಮತ್ತು ವಿಜ್ಞಾನ ಕಲಿಯಲು ತುಂಬಾ ಕಷ್ಟವಾಗುತ್ತಿದೆ. ಶ್ವೇತಾಳ ತಾಯಿ ಪ್ರಿಯಾಳಿಗೆ ಕಲಿಯಲು ಸ್ವಲ್ಪ ಸಹಾಯ ಮಾಡು ಎಂದು ಹೇಳಿದರೂ ಕೇಳದೆ ಪ್ರಿಯಾಳನ್ನು ತಿರಸ್ಕರಿಸುತ್ತಾಳೆ. ಆದರೆ ಪ್ರಿಯಾ ತನಗೆ ಎಷ್ಟು ಕಷ್ಟವಾದರೂ ಶ್ವೇತಾಳಿಗೆ ಸಹಾಯ ಮಾಡುವುದರಲ್ಲಿ ಹಿಂಜರಿಯುವುದಿಲ್ಲ.

   **a. i) ಶ್ವೇತಾಳ ಸ್ವಭಾವ ಎಂತಹುದು?**

   **ii) ಪ್ರಿಯಾಳ ಅಗತ್ಯತೆ ಏನು?**

   **b. i) ಶ್ವೇತಾಳ ನಡವಳಿಕೆಯ ಬಗ್ಗೆ ನಿನ್ನ ಅಭಿಪ್ರಾಯವೇನು?**

   **ii) ಶ್ವೇತಾಳ ಸ್ಥಳದಲ್ಲಿ ನೀನಿದ್ದಿದ್ದರೆ ಏನು ಮಾಡುತ್ತಿದ್ದಿ?**

   **c) ಇತರರಿಗೆ ಸಹಾಯ ಮಾಡುವ ಕೆಲವು ಸಂದರ್ಭಗಳನ್ನು ಬರೆ.**